ಶ್ರೀ ಬಿ. ಹೆಚ್. ಯಂಕಾ ನಾಯಕ್.— ನಾನು ಓದುವುದಕ್ಕಿಂತ ಸಚಿವರೇ ಓದಿ ಹೇಳಲಿ. ಮುಂದಾದರೂ ದಾನ ಕೊಟ್ಟಿರುವಂತಹ ಜಮೀನನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆಯೇ ಹೇಗೆ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದು ನಿಜ. ಒಂದು ಎಕರೆ ಜಮೀನನ್ನು ಶ್ರೀ ವೀರಭದ್ರಪ್ಪ ಎಂಬುವರು ದಾನ ಮಾಡಿದ್ದಾರೆ. ಅದು ಕೀ ವಿಲೇಜ್ ಸ್ಕೀಮ್. ಅಲ್ಲಿ ಆಸ್ಪತ್ರೆ ಕಟ್ಟಬೇಕು ಎಂಬ ಒಂದು ಸ್ಕೀಮ್ ಪ್ರಕಾರ ಕೊಟ್ಟಿದ್ದಾರೆ. ಅದರ ಆದ ಮೇಲೆ ಜಿಲ್ಲಾ ಪರಿಷತ್ ಆಸ್ಪತ್ರೆಕ್ಕೆ ಬಂತು. ಅದು ಜಿಲ್ಲಾ ಪರಿಷತ್‌ಗೆ ಹೋಯಿತು. ಜಮೀನು ಹಾಗೆಯೇ ಇದೆ. ನಾವು ಏನೂ ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲ. ಹರಪನಹಳ್ಳಿಯಲ್ಲಿ ಈಗಿರುವ ದನದ ಆಸ್ಪತ್ರೆ ಶಿಥಿಲ ಆಗಿದೆ. ಅಲ್ಲಿ ಒಂದು ಆಸ್ಪತ್ರೆ ಕಟ್ಟಬೇಕು ಎಂದು ಯೋಚನೆ ಮಾಡುತ್ತಿದ್ದೇವೆ. ಆದರೆ ಹಣ ಒದಗಿಸುವುದಕ್ಕೆ ಆಗಿಲ್ಲ.

ಶ್ರೀ ಬಿ.ಹೆಚ್. ಯಂಕಾ ನಾಯಕ್.— ಸರ್ಕಾರ ಒಂದು ಎಕರೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಇದು ಸರ್ಕಾರದ ಸ್ವಾಧೀನದಲ್ಲಿತ್ತು. ಈಗ ಅದು ಜಿಲ್ಲಾ ಪರಿಷತ್‌ಗೆ ಸ್ವಾಧೀನಕ್ಕೆ ಹೋಗಿದೆ.

ಪ್ರಶ್ನೆ ಸಂಖ್ಯೆ: ೫೩೫ (ಸದಸ್ಯರು ಗೈರು ಹಾಜರು)

ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು

೫೭೩. ಶ್ರೀ ಕರಿಯಣ್ಣ (ಹೊಳಿಹೊನ್ನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ? ಆ ಪೈಕಿ ಸರ್ಕಾರದ ಹಾಗೂ ಖಾಸಗಿಯವರ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಖಾಸಗಿಯವರು ನಡೆಸುತ್ತಿರುವ ವೈದ್ಯಕೀಯ ಕಾಲೇಜುಗಳು ಯಾವ ಯಾವ ಜಿಲ್ಲೆಯಲ್ಲಿ ಇವೆ ? ಇವುಗಳನ್ನು ಯಾರು ಯಾರು ಅಥವಾ ಯಾವ ಸಂಸ್ಥೆಗಳು ನಡೆಸುತ್ತವೆ (ಹೆಸರುಗಳೊಂದಿಗೆ ವಿವರ ನೀಡುವುದು).

ಇ) ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶಕ್ಕೆ ಸರ್ಕಾರ ಅವಕಾಶ ಕೊಟ್ಟಿರುತ್ತದೆ ಹಾಗೂ ಪ್ರತಿ ಕಾಲೇಜಿಗೆ ನೀಡಿರುವ ಪ್ರವೇಶ ಪ್ರಮಾಣವೆಷ್ಟು ?

ಈ) ಇದರಲ್ಲಿ ಹರಿಜನರ ಗಿರಿಜನ ವಿದ್ಯಾರ್ಥಿಗಳ ಪ್ರವೇಶಕ್ಕೆ ವಿಶೇಷವಾತಿ ಏನಾದರೂ ಇದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳು ೪
ಖಾಸಗಿ ವೈದ್ಯಕೀಯ ಕಾಲೇಜುಗಳು ೧೪

ಆ) ವಿವರಣೆಯು ಅನುಬಂಧ 'ಎ'ರಲ್ಲಿ ಲಗತ್ತಿಸಲಾಗಿದೆ.

ಇ) ಖಾಸಗಿ ವೈದ್ಯಕೀಯ ಕಾಲೇಜುಗಳು ಪ್ರವೇಶ ಸಾಮರ್ಥ್ಯ ೧೯೯೯-೯೦

೧ ಕಸ್ತೂರಬಾ ವೈದ್ಯಕೀಯ ಕಾಲೇಜ್, ಮಂಗಳೂರು ೨೫೦
ಕಸ್ತೂರಬಾ ವೈದ್ಯಕೀಯ ಕಾಲೇಜ್, ಮಣಿಪಾಲ ೨೫೦
೨) ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು ೬೦
೩) ಜೆ. ಎನ್. ವೈದ್ಯಕೀಯ ಕಾಲೇಜ್, ಬೆಳಗಾಂ ೧೭೫
೪) ಎಂ. ಆರ್. ವೈದ್ಯಕೀಯ ಕಾಲೇಜ್, ಗುಲ್ಬರ್ಗಾ ೧೫೦
೫) ಜೆಜೆಎಂ ವೈದ್ಯಕೀಯ ಕಾಲೇಜ್, ದಾವಣಗೆರೆ ೨೫೦
೬) ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜ್ ಬೆಂಗಳೂರು ೧೦೦
೭) ಕೆಂಪೇಗೌಡ ವೈದ್ಯಕೀಯ ಕಾಲೇಜ್, ಬೆಂಗಳೂರು ೫೦
೮) ಡಾ. ಬಿ. ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜ್, ಬೆಂಗಳೂರು ೫೦

೯) ಜೆ.ಎಸ್.ಎಸ್. ವೈದ್ಯಕೀಯ ಕಾಲೇಜ್, ಮೈಸೂರು ೨೦೦
೧೦) ಆದಿಚುಂಚನಗಿರಿ ವೈದ್ಯಕೀಯ ಕಾಲೇಜ್ ಬೆಳ್ಳೂರು ೧೫೦
೧೧) ಆಲ್ ಅಮಿನ್ ವೈದಕೀಯ ಕಾಲೇಜ್, ಬಿಜಾಪುರ ೧೨೦
೧೨) ಬಿಎಲ್‌ಡಿಇಎ ವೈದ್ಯಕೀಯ ಕಾಲೇಜ್, ಬಿಜಾಪುರ ೧೩೦
೧೩) ಶ್ರೀ ದೇವರಾಜ ಅರಸು ವೈದ್ಯಕೀಯ ಕಾಲೇಜು, ಕೋಲಾರ ೧೫೦
೧೪) ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು ೧೫೦

ಈ) ಖಾಸಗಿ ಕಾಲೇಜಿನಲ್ಲಿ ಸರ್ಕಾರಿ ಸೀಟುಗಳಲ್ಲಿ ಹರಿಜನ ಗಿರಿಜನಗಳಿಗೆ ವಿಶೇಷವಾಗಿ ಇದೆ.

ವಿಧಾನಸಭಾ ಸದಸ್ಯರಾದ ಶ್ರೀ ಕರಿಯಣ್ಣ (ಹೊಳೆಹೊನ್ನೂರು) ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೫೭೩ರ ಪ್ರಶ್ನೆ (ಅ)ಗೆ ಉತ್ತರದ

ಅನುಬಂಧ—'ಎ'

ಕ್ರಮ ಸಂಖ್ಯೆ	ವೈದಕೀಯ ಕಾಲೇಜುಗಳ ಹೆಸರು	ಇರುವ ಜಿಲ್ಲೆ	ನಡೆಸುತ್ತಿರುವ ಸಂಸ್ಥೆಯ ಹೆಸರುಗಳು
೧,	ಕೆಎಂಸಿ ಮಂಗಳೂರು ಶಾಖೆ	ದಕ್ಷಿಣ ಕನ್ನಡ	ಟಿ.ಎಂ.ಎ.ಪೈ, ಫೌಂಡೇಷನ್, ಮಣಿಪಾಲ
	ಕೆಎಂಸಿ, ಮಣಿಪಾಲ ಶಾಖೆ	ದಕ್ಷಿಣ ಕನ್ನಡ	ಟಿ.ಎಂ.ಎ.ಪೈ. ಫೌಂಡೇಷನ್, ಮಣಿಪಾಲ
೨,	ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಬೆಂಗಳೂರು,	ಬೆಂಗಳೂರು	ಸಿ.ಬಿ.ಸಿ ಐ. ಸೊಸೈಟಿ ಫಾರ್ ಮೆಡಿಕಲ್ ಎಜುಕೇಷನ್
೩.	ಜೆ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	ಬೆಳಗಾಂ	ಕೆ ಎಲ್. ಇ. ಸೊಸೈಟಿ. ಬೆಳಗಾಂ
೪.	ಎಂ. ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	ಗುಲ್ಬರ್ಗಾ	ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆ,
೫.	ಜೆ.ಜೆ.ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	ಚಿತ್ರದುರ್ಗ ಜಿಲ್ಲೆ	ಬಾಪೂಜ ಶಿಕ್ಷಣ ಸಂಸ್ಥೆ
೬.	ಎಂ ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು.	ಬೆಂಗಳೂರು	ಗೋಕುಲ ಎಜುಕೇಷನ್ ಫೌಂಡೇಷನ್
೭.	ಕೆಂಪೇಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು	ಬೆಂಗಳೂರು	ಒಕ್ಕಲಿಗರ ಸಂಘ, ಬೆಂಗಳೂರು
೮.	ಡಾ. ಬಿ ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	ಬೆಂಗಳೂರು	ಆನಂದ ಸೋಶಿಯಲ್ ಅಂಡ್ ಎಜುಕೇಷನ್ ಟ್ರಸ್ಟ್
೯.	ಆಲ್ ಅಮಿನ್ ಮೆಡಿಕಲ್ ಕಾಲೇಜು, ಬಿಜಾಪುರ	ಬಿಜಾಪುರ	ಆಲ್ ಅಮಿನ್ ಚಾರಿಟೇಬಲ್ ಟ್ರಸ್ಟ್
೧೦.	ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	ಮೈಸೂರು	ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ
೧೧	ಆದಿಚುಂಚನಗಿರಿ ವೈದ್ಯಕೀಯ ಕಾಲೇಜು ಬೆಳ್ಳೂರು	ಮಂಡ್ಯ ಜಿಲ್ಲೆ	ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್
೧೨.	ಬಿ.ಎಲ್.ಡಿ.ಇ.ಎ. ವೈದ್ಯಕೀಯ ಕಾಲೇಜು, ಬಿಜಾಪುರ	ಬಿಜಾಪುರ	ಬಿ.ಎಲ್.ಡಿ.ಇ.ಎ ಅಸೋಸಿಯೇಷನ್
೧೩.	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	ಕೋಲಾರ ಜಿಲ್ಲೆ	ದೇವರಾಜ ಅರಸ್ ಎಜುಕೇಷನಲ್ ಟ್ರಸ್ಟ್,
೧೪,	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	ತುಮಕೂರು	ಶ್ರೀ ಸಿದ್ಧಾರ್ಥ ಎಜುಕೇಷನ್ ಸೊಸೈಟಿ

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ಸರ್ಕಾರಿ ವೈದ್ಯಕೀಯ ಕಾಲೇಜು ೪ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ೧೪ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಈ ಖಾಸಗಿ ಕಾಲೇಜಿನಲ್ಲಿ.....

SRI KAGODU THIMMAPPA.—Let the other Members know the reply. Once the reply becomes the property of the House, the other Members are also expected to know the reply. We have not received the reply to this question.

ಶ್ರೀ ಎಂ. ವಿ. ವೆಂಕಟಪ್ಪ.—ಸಾಮಾನ್ಯವಾಗಿ ಉತ್ತರ ಅಚ್ಚು ಆಗಿದೆ ಎಂದು ಹೇಳುತ್ತಾರೆ. ...

೧೧-೫೦ ಎ. ಎಂ.

ಅಧ್ಯಕ್ಷರು.—ಎಲ್ಲರಿಗೂ ಉತ್ತರ ಬಂದಿದೆ. ನಿಮಗೆ ಬರದೇ ಇದ್ದರೆ ಕಳಿಸಿಕೊಡುತ್ತೇನೆ. The idea is to save the time of the House, We furnish the replies and the reply would be, "ಉತ್ತರಗಳನ್ನು ಒದಗಿಸಲಾಗಿದೆ" ಎಂದು ಅಷ್ಟು ಹೇಳುತ್ತಾರೆ ಬಾಕಿಯವರ ಕೈಯಲ್ಲಿ ಅದರ ಉತ್ತರಗಳು ಇರುತ್ತವೆ.

ಶ್ರೀ ಕರಿಯಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳು ೪ ಖಾಸಗಿ ವೈದ್ಯಕೀಯ ಕಾಲೇಜುಗಳು ೧೪ ಎಂದು ಹೇಳಿದ್ದಾರೆ ಇದರಲ್ಲಿ ೨೦೩೫ ಅಭ್ಯರ್ಥಿಗಳಿಗೆ ಸೇರುವುದಕ್ಕೆ ಅವಕಾಶವಿದೆ. ಇದರಲ್ಲಿ ಹರಿಜನ ಗಿರಿಜನರಿಗೆ ಸರ್ಕಾರಿ ಸೀಟ್‌ಗಳಲ್ಲಿ ಮಾತ್ರ ಅವಕಾಶವಿದೆ. ಬೇರೆಯವರಲ್ಲಿ ಅವಕಾಶವಿಲ್ಲ. ಸರ್ಕಾರದಲ್ಲಿ ಪ್ರತಿಯೊಂದು ಹಂತದಲ್ಲೂ ಕಡೇ ಪಕ್ಷ ೧೮ ಪರ್ಸೆಂಟ್ ಆದರೂ ಹರಿಜನಗಿರಿಜನರ ಮಕ್ಕಳು ವಿದ್ಯಾವಂತರಾಗಲಿ ಎಂದು ಅವಕಾಶ ನೀಡಿದ್ದರೂ ಈ ಖಾಸಗಿ ಕಾಲೇಜುಗಳಲ್ಲಿ ಅವಕಾಶ ನೀಡದಿರಲು ಕಾರಣವೇನು ? ಇದರಿಂದ ಹರಿಜನ ಗಿರಿಜನ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು ಅನ್ಯಾಯ ಮಾಡಿದಂತೆ ಆಗಲಿಲ್ಲವೇ ? ಇದಕ್ಕೆ ಮಾನ್ಯ ಸಚಿವರ ಉತ್ತರವೇನು ಎನ್ನುವುದನ್ನು ಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೆ ಈ ಖಾಸಗಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸೇರ್ಪಡೆಯಲ್ಲಿ ಸರ್ಕಾರಕ್ಕೆ ಸಲ್ಲುವಂಥ ಸೀಟುಗಳಲ್ಲಿ ಶೇಕಡ ೫೫ ಸಲಾತಿಯಾಪ್ಪು ಹರಿಜನ ಗಿರಿಜನರ ಮಕ್ಕಳಿಗೆ ಸಿಗುತ್ತದೆ. ಆದರೆ ಬೇರೆ ಅವರ ಸ್ವಂತ ಸೀಟುಗಳನ್ನು ನಾವು ಕೇಳುವಹಾಗಿಲ್ಲ. ಕೇಳಿದರೆ ಅವರು ಉಚ್ಚನ್ಯಾಯಾಲಯಕ್ಕೆ ಹೋಗಿ ಅದಕ್ಕೆ ಸ್ಟೇ ತರುವಂಥ ಸಂದರ್ಭ ಉಂಟು.

ಶ್ರೀ ಕರಿಯಣ್ಣ.—ಈ ರೀತಿಯಾಗಿ ಸರ್ಕಾರವೇ ಖಾಸಗಿ ಕಾಲೇಜುಗಳನ್ನು ಕೊಟ್ಟು ಸುಮಾರು ೪೦೦ ಹರಿಜನ ಗಿರಿಜನರ ಮಕ್ಕಳು ಡಾಕ್ಟರುಗಳಾಗುವುದನ್ನು ತಪ್ಪಿಸುವಂಥಾದ್ದು ಸರ್ಕಾರವೇ ಮಾಡಿದಂತೆ ಆಗುತ್ತದೆ. ಹಾಗೂ ಹಿಂದೆ ಗವರ್ನರ್‌ರವರ ಆಡಳಿತದಲ್ಲಿ ಸರ್ಕಾರವೇ ಡೊನೇಷನ್ ತೆಗೆದುಕೊಳ್ಳತಕ್ಕಂಥ ನೀತಿಯ ಕಾನೂನನ್ನು ಮಾಡಿಕೊಟ್ಟಿದ್ದಾರೆ. ಈಗ ಸರ್ಕಾರವೇ ಡೊನೇಷನ್ ತೆಗೆದುಕೊಳ್ಳುವ ರೀತಿಯಲ್ಲಿ ಫೀಸನ್ನು ನಿಗದಿ ಮಾಡಿರುವುದರಿಂದ ೧೮ ಪರ್ಸೆಂಟ್ ಸೀಟನ್ನು ಕೊಡುವುದಕ್ಕೆ ಏಕೆ ಅವಕಾಶ ಮಾಡಿಕೊಡಬಾರದು. ಈಗ ಪ್ರತಿವರ್ಷ ೨೫ ಸಾವಿರ ಫೀಸನ್ನು ತೆಗೆದುಕೊಳ್ಳಬಹುದೆಂದು ಕಾನೂನು ಮಾಡಿದ್ದಾರೆ. ಆ ಫೀಸನ್ನು ತೆಗೆದುಕೊಂಡ ಮೇಲೆ ೧೮ ಪರ್ಸೆಂಟ್ ಸೀಟನ್ನು ಕೊಡಬೇಕೆಂದು ಸರ್ಕಾರ ಏಕೆ ಕಾನೂನು ಮಾಡಬಾರದು ಆ ರೀತಿ ಮಾಡುವುದರಿಂದ ಏನು ತೊಂದರೆ ಆಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು ಎಂದು ಬಯಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಸಭಾಧ್ಯಕ್ಷರೆ. ಅವನ್ನೆಲ್ಲ ಮನಗಂಡೇ ನಮ್ಮ ಸಚಿವ ಸಂಪುಟದ ಸಭೆಯಲ್ಲಿ ಇದಕ್ಕಾಗಿ ಒಂದು ಉಪಸಮಿತಿಯನ್ನು ನೇಮಕ ಮಾಡಿದ್ದೇವೆ ಅವರು ಇದರ ಬಗ್ಗೆ ಎಲ್ಲ ವಿಷಯಗಳನ್ನು ಮಾಡಿ ಸಾಧಕಬಾಧಕಗಳನ್ನು ತಿಳಿದುಕೊಂಡು ನಂತರ ಏನು ತೀರ್ಮಾನವನ್ನು ಕೈಗೊಳ್ಳಬೇಕೆಂದು ನಾವು ನಿರ್ಧರಿಸಲಿಕ್ಕೆ ಇದ್ದೇವೆ. ಎರಡು ವೀಟಿಂಗ್‌ಗಳು ಈಗಾಗಲೇ ಆಗಿದೆ ಇನ್ನು ಮುಂದಕ್ಕೆ ನಾವು ಕುಲಂಕುಷವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕಾಗಿದೆ.